ಡಾ॥ ಆರ್. ನಾಗನಗೌಡ.—ಸ್ವಕಾಲದಲ್ಲಿ ಆಡಿಟ್ ಆಗದಿರುವುದೂ ಒಂದು ಕಾರಣವೆನ್ನಬಹುದು. But we have now got an arrangement by which all these societies are audited in time.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅನೇಕ ಸೊಸೈಟಿಗಳಿಗೆ ಸರ್ಕಾರದಿಂದಲೇ ಚಾರ್ಜಶೀಟ್ ಚಾರ್ಜುಗಳು ವಗೈರೆ ಬರಬೇಕಾಗಿದ್ದು ಪ್ರಬಾರದೆ ಬಹಳ ಕಾಲದಿಂದ ಬಾಕಿ ನಿಂತಿಲ್ಲವೇ?

ಡಾ॥ ಆರ್. ನಾಗನಗೌಡ.—ಹಿಂದಿನವು ಕೆಲವು ನಿಂತಿವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದನ್ನು ಬೇಗ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ? ನಮಾರು ನಾಲ್ಕು-ಐದು ವರ್ಷಗಳಿಂದಲೂ ಸರ್ಕಾರದಿಂದ ಸೊಸೈಟಿಗಳಿಗೆ ಕೊಡಬೇಕಾದ ಮೊಬಲಗು ನಿಂತಿದೆಯಲ್ಲವೇ?

ಡಾ॥ ಆರ್. ನಾಗನಗೌಡ.—ಅದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

Sri A. BHEEMAPPA NAIK.—Are the Inspectors and the Assistant Directors inspecting the Societies; are they not responsible if they have not detected in time these misappropriation cases apart from audit?

Dr. R. NAGAN GOWDA.—As a matter of fact, the first three societies that I mentioned have been inspected either by the Inspector or the Assistant Registrar who checked the cash balances and found out; they did not wait till the audit at all in those cases.

Sri A. BHEEMAPPA NAIK.—After how many years did they check and find out about these misappropriations; are they not responsible for checking the societies apart from any other things; are these officers not meant exclusively for this work?

Dr. R. NAGAN GOWDA.—I do not have exactly the period. But usually during the course of a year, probably they may inspect a number of times.

Sri A. BHEEMAPPA NAIK.—Will the Government be pleased to state whether they would ask them to check once in a month because the duty of the Inspectors is that and nothing else?

Dr. R. NAGAN GOWDA.—We will consider the matter and ask the Inspector to check these cash balances and audit quickly.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಆಗಿರತಕ್ಕ ಪರಿಣಾಮವೇ ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿಯೂ ಆಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

Mr. SPEAKER.—That question had already been put.

ಶ್ರೀ ಆರ್. ಅನಂತರಾಮ್.—ಈ ಸೊಸೈಟಿಗಳಿಗೆ ಸರ್ಕಾರದವರು ಗೊಬ್ಬರ, ಬೀಜ, ಕಬ್ಬಿಣ ಮುಂತಾದ ಸಾಮಾನುಗಳನ್ನು ಸಾಲವಾಗಿ ಕೊಟ್ಟಿದ್ದು ವಸೂಲಾಗಿದೆಯೆಂದು ವರದಿ ಬಂದಿದೆಯೆಂಬುದು ನಿಜವೇ?

Dr. R. NAGAN GOWDA.—I must have notice for that whether these societies are involved in that.

Multi-purpose Societies (Efforts to rejuvenate).

Q.—390. **Sri Mali MARIYAPPA** (Pavagada).—

Will the Government be pleased to state:—

whether they are having any plan to rejuvenate the Multi-purpose Societies in the State?

A.—**Dr. R. NAGAN GOWDA** (Minister for Agriculture).—

Yes. Proposals are under consideration of Government.

ಶ್ರೀ ಮಾಲಿ ಮರಿಯಪ್ಪ.—ಕೆಲವು ಯೋಜನೆಗಳನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ಹೇಳಿದ್ದೀರಿ. ಮುಖ್ಯವಾದ ಎರಡು ಮೂರು ಯೋಜನೆಗಳನ್ನು ಹೇಳುತ್ತೀರಾ?

Dr. R. NAGAN GOWDA.—We have advanced, for instance, Rs. 5 lakhs to the Apex Bank to advance to multi-purpose co-operative societies to purchase ammonium sulphate and then sell it. Now we are recognising the multi-purpose societies as sole dealers of all products manufactured by Government industries and also the ammonium sulphate. We are trying to harness all these multi-purpose societies as primary co-operative societies the short term credit work that we are organising and we are also making arrangements to enable these taluk multi-purpose societies to have godowns so that when a man who has taken loans for crop cultivation surrenders the crop instead of giving the cash, the products could be taken over by taluk societies and kept in godowns and sold. And we are also making arrangements to pay back co-operative societies the moneys that we are due to these by way of subventions in the shape of clerks and godown grants, etc., that have been pending payment. We are trying to pay them all very quickly.

ಶ್ರೀ ಮಾಲಿ ಮರಿಯಪ್ಪ.—ಅನೇಕ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿರತಕ್ಕವು ಭದ್ರಾವತಿಯಿಂದ ಒದಗತಕ್ಕ ಕಬ್ಬಿಣದ ಸಾಮಾನುಗಳು, ಗೊಬ್ಬರ ಇತ್ಯಾದಿಗಳು ಸರಿಯಾಗಿ ಒದಗುತ್ತಿಲ್ಲವೆಂದು ಹೇಳುತ್ತಿರುವುದು ಗೊತ್ತಿದೆಯೇ?

ಡಾ॥ ಆರ್. ನಾಗನಗೌಡ.—Ammonium sulphate ವಿಷಯದಲ್ಲಿ ನಾವು ಬಹಳ ಸಮರ್ಪಕವಾದ ಏರ್ಪಾಡು ಮಾಡಿದ್ದೇವೆ. ಈ ವರ್ಷ ಬೇಕಾದಷ್ಟು ammonium sulphate ಇದೆ. ಸೊಸೈಟಿಗಳನ್ನು sole agents ಆಗಿ ಮಾಡಿದ್ದೇವೆ. ಇತರ ಸಾಮಾನುಗಳ ವಿಚಾರದಲ್ಲೂ ಭದ್ರಾವತಿ ಕಾರ್ಖಾನೆಗೆ ತಿಳಿಸಿದ್ದೇವೆ. Indents ಕಳುಹಿಸಿದ ಕೂಡಲೆ ಸಕಾಲದಲ್ಲಿ ಕೊಡುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ವ್ಯವಸಾಯದ ಇಲಾಖೆಗೆ ಬೇಕಾದ ಸಾಮಾನುಗಳು ಕಡಮೆ ಬಿದ್ದವೆಯೆಂದು ಗೊತ್ತಾದುದರ ಮೇಲೆ special ಆಗಿ manufacture ಮಾಡಿ ಒಂದು ಸಾರಿ ಕಳುಹಿಸಿದ್ದೇವೆ. ಅದು ಇನ್ನೂ ಸಾಲದೆಂದು manufacturing programme ಒಂದನ್ನು ಹೊಸದಾಗಿ ಹಾಕಿಕೊಳ್ಳಬೇಕೆಂದು order ಕೊಟ್ಟಿದೆ. ಈಗ ಮಾಡುತ್ತೇವೆ.

ಶ್ರೀ ಮಾಲಿ ಮರಿಯಪ್ಪ.—ಸರ್ಕಾರದವರು ವ್ಯವಸಾಯದ ಮುಟ್ಟುಗಳಗೋಸ್ಕರ 200 ಟನ್ನುಗಳನ್ನು ಮಾತ್ರ ನಿಗದಿ ಮಾಡಿದ್ದಾರೆಂದು ಹೇಳಿದ್ದಾರೆ. ಅದು ಸರಿಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇತ್ತೀಚೆಗೆ ನೋಡಿದ್ದರಲ್ಲಿ agricultural quota ಸಾಲದೆಂದು ಗೊತ್ತಾಗಿದೆ. ಅದರಮೇಲೆ ಇಂಡಿಯಾ ಸರ್ಕಾರದವರಿಗೆ ಬರೆದು Agricultural purposes ಗೆ ಜಾಸ್ತಿ ಮಾಡಬೇಕೆಂದು ತಿಳಿಸುತ್ತೇವೆ.

ಶ್ರೀ ಮಾಲಿ ಮರಿಯಪ್ಪ.—ಅಷ್ಟು ಜಾಗ್ರತೆ ವ್ಯವಸಾಯದ ಮುಟ್ಟುಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ತಕ್ಷಣ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಮಾಲಿ ಮರಿಯಪ್ಪ.—ಕೆಲವು ಸರ್ಕಾರಿ ಕೈಗಾರಿಕೆಗಳ ಸಾಮಾನುಗಳನ್ನು ಈ ಸೊಸೈಟಿಗಳ ಮೂಲಕ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗುತ್ತದೆಯೆಂದು ಹೇಳಿದಿರಿ. ಇದು ಬಹಳ ದಿವಸಗಳಿಂದಲೂ ಇರತಕ್ಕಂಥ ನಜರ್ಪ್ಷ ಆಗಿದೆ. ತಾವು ಇದನ್ನು ಇಲ್ಲಿಯವರೆಗೂ ಏತಕ್ಕೆ ಕಾರ್ಯಗತ ಮಾಡಲಿಲ್ಲ?

ಡಾ॥ ಆರ್. ನಾಗನಗೌಡ.—ಇಷ್ಟು ದಿವಸಗಳ ತನಕ ಈ ಸೊಸೈಟಿಗಳಿಗೂ ಬಹಳ ಕೆಲಸವಿತ್ತು. ಆದುದರಿಂದ ಅದನ್ನು ಕೈಗೊಳ್ಳಲಿಕ್ಕಾಗಲಿಲ್ಲ. ಈಗ ಅದಕ್ಕೆಲ್ಲಾ ಇನ್ನು ಮೇಲೆ ಏರ್ಪಾಡು ಮಾಡುತ್ತೇವೆ.

ಶ್ರೀ ಮಾಲಿ ಮರಿಯಪ್ಪ.—ಈಗ ಈ ತಾಲ್ಲೂಕು ಲೆವಲ್‌ನಲ್ಲಿರತಕ್ಕಂಥ ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳು ಇರತಕ್ಕ ಕಡೆಗಳಲ್ಲಿ ಮುನಿಸಿಪಾಲಿಟಿಯವರು ಐದು ವರ್ಷಗಳ ಪ್ರೊಫೆಷ್ಷ ಟ್ಯಾಕ್ಸ್‌ನ್ನೂ ಒಂದೇ ಸಾರ್ತಿಗೆ ಕೊಟ್ಟುಬಿಡಬೇಕೆಂದು ವಸೂಲ್ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಮಾಲಿ ಮರಿಯಪ್ಪ.—ಸರ್ಕಾರದವರು ಈ ವಿಚಾರದಲ್ಲಿ ವಿನಾಯಿತಿ ಕೊಡಿಸತಕ್ಕ ಬಗ್ಗೆ ಪರಿಶೀಲನೆ ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಅದೇನೂ ಇದ್ದಹಾಗೆ ಕಾಣುವುದಿಲ್ಲ.

ಡಾ॥ ಆರ್. ನಾಗನಗೌಡ.—ಅದನ್ನು ಬೇಕಾದರೆ ಪರಿಶೀಲನೆ ಮಾಡೋಣ.

ಶ್ರೀ ಬಿ. ಬಸಪ್ಪ.—ಈಗ ಈ ತಾಲ್ಲೂಕು ಲೆವಲ್‌ನಲ್ಲಿ ಸ್ಥಾಪನೆಯಾಗಿರತಕ್ಕಂಥ ಹೊಸ ಮಲ್ಟಿಪರ್ಪಸ್ ಸೊಸೈಟಿಗಳಿಗೆ ಕಬ್ಬಿಣದ ಸಾಮಾನುಗಳನ್ನು ಮಾರಾಟ ಮಾಡಲು ಕಬ್ಬಿಣದ ಅರಾಟ್‌ಮೆಂಟ್ ಮಾಡಿದ್ದೇವೆಂದು ಹೇಳೋಣವಾಯಿತು. ಆದರೆ ಹಾಗೆ ಆ ಕಬ್ಬಿಣದ ಅರಾಟ್‌ಮೆಂಟನ್ನು ಪಡೆಯತಕ್ಕ ಬಗ್ಗೆ ಚೀಫ್ ಕಂಟ್ರೋಲರವರಿಂದ ಅದಕ್ಕೆ ಅಂಗೀಕಾರ ಪಡೆದೆ ಬೇಕೆಂಬ ನಿರ್ಬಂಧವೇನಾದರೂ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಎಲ್ಲೆಲ್ಲಿ ಈ ರಿಜಿಸ್ಟರ್ಡ್ ಡೀಲರ್ಸ್‌ಗಳಿದ್ದಾರೋ ಅವರೆಲ್ಲರಿಗೂ ಈಗ ಕಬ್ಬಿಣವನ್ನು ಅರಾಟ್ ಮಾಡಿದ್ದೇವೆ.

ಶ್ರೀ ಬಿ. ಬಸಪ್ಪ.—ಈ ಚೀಫ್ ಕಂಟ್ರೋಲರ್ ಫಾರ್ ಐರನ್ ಅವರಿಂದ ಅಂಗೀಕಾರ ಪಡೆದ ಹೊರತು ಈ ಹೊಸ ಮಲ್ಟಿಪರ್ಪಸ್ ಸೊಸೈಟಿಗಳಿಗೆ ಕಬ್ಬಿಣವನ್ನು ಕೊಡುವುದಕ್ಕಾಗುವುದಿಲ್ಲವೆಂದು ಕಬ್ಬಿಣದ ಕಾರ್ಖಾನೆಯವರು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—If you tell me what exactly you mean, I shall be able to reply.

ಶ್ರೀ ಬಿ. ಬಸಪ್ಪ.—ಈಗ ಹೊಸದಾಗಿ ಪ್ರಾರಂಭವಾಗಿರತಕ್ಕಂಥ ಮಲ್ಟಿಪರ್ಪಸ್ ಸೊಸೈಟಿಗಳವರು ಭದ್ರಾವತಿಗೆ ಕಬ್ಬಿಣಕ್ಕಾಗಿ ಇಂಡೆಂಟ್ ಮಾಡಿದರೆ ಅಂಥ ಸೊಸೈಟಿಗಳಿಗೆ ಇಂಡಿಯಾ ಸರ್ಕಾರದ ಚೀಫ್ ಕಂಟ್ರೋಲರ್ ಫಾರ್ ಐರನ್ ಅವರು ಈ ಹೊಸ ಡೀಲರುಗಳನ್ನು ನಾವು ಅಂಗೀಕಾರ ಮಾಡಿದ್ದೇವೆಂದು ಹೇಳಿದರೆ ಮಾತ್ರವೇ ಈ ಕಬ್ಬಿಣವನ್ನು ಕೊಡಲಾಗುತ್ತದೆ ಇಲ್ಲದಿದ್ದರೆ ಇಲ್ಲ ಎಂದು ಅವರು ಹೇಳುತ್ತಿದ್ದಾರೆ. ಇದಕ್ಕೆ ತಾವೇನಾದರೂ ಒಂದು ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೇನಾದರೂ ತೊಂದರೆಯಿದ್ದರೆ ಈಗ ಯಾವರೀತಿ ಈ ರಿಜಿಸ್ಟರ್ಡ್ ಡೀಲರುಗಳಿಗೆ ಕಬ್ಬಿಣವನ್ನು ನರಬರಾಯಿ ಮಾಡುತ್ತಿದ್ದಾರೋ ಅದೇ ರೀತಿ ಈ ಸೊಸೈಟಿಗಳಿಗೂ ನರಬರಾಯಿ ಮಾಡಬೇಕೆಂದು ನಾನು ಈ ದಿವಸವೇ ಅವರಿಗೆ ಬರೆಯುತ್ತೇನೆ.

ಶ್ರೀ ಬಿ. ಬಸಪ್ಪ.—ಈ ಷಾರ್ಟ್ ಟರ್ಮ್ ಕ್ರೆಡಿಟ್ ಬಿಸಿನೆಸ್ಸನ್ನು ಮಾಡುವ ಈ ರಿಜಿಸ್ಟರ್ಡ್ ಸೊಸೈಟಿಗಳಿಗೆ ಮಾತ್ರ ಅವಕಾಶವಿದೆಯೇ ಹೊರತು ಗ್ರಾಮ ಸೇವಾ ಸಹಕಾರ ಸಂಘಗಳಿಗೆ ಅದನ್ನು ನಡೆಸುವುದಕ್ಕೆ ಅವಕಾಶವಿಲ್ಲವೆಂದು ತಾವೇನಾದರೂ ಕಂಡೀಷ್ಟ್ ಹಾಕಿದ್ದೀರಾ?

ಡಾ॥ ಆರ್. ನಾಗನಗೌಡ.—ಈಗ ಈ ಮಲ್ಟಿಪರ್ಪಸ್ ಸೊಸೈಟಿಗಳಿಗೂ ಕೂಡ small credit system ಮೇರೆ cash transaction deal ಮಾಡುವುದಕ್ಕೆ ಬೈಲಾದಲ್ಲಿ ನಾವು allow ಮಾಡಿದ್ದೇವೆ.

ಶ್ರೀ ಬಿ. ಬಸಪ್ಪ.—ಆ ಬೈಲಾದಲ್ಲಿ ಈ cash transaction ಅನ್ನು ಪ್ರೈಮರಿ ಸೊಸೈಟಿಗಳು ಮಾತ್ರವೇ ತೆಗೆದುಕೊಳ್ಳಬೇಕೆಂಬ ತಾವೇನಾದರೂ ನಿರ್ಬಂಧವನ್ನು ಹಾಕಿದ್ದೀರಾ?

ಡಾ॥ ಆರ್. ನಾಗನಗೌಡ.—ಅದೇನೂ ಇದ್ದಹಾಗೆ ಕಾಣುವುದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನಾಮಳಿ ಇರತಕ್ಕ ಈ ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳು ಈಗ ಎಷ್ಟು ಜೀವಂತವಾಗಿ ಉಳಿದಿವೆ ಎನ್ನುವುದಕ್ಕೆ ತಮ್ಮಲ್ಲಿ ಏನಾದರೂ ಲೆಕ್ಕಪತ್ರಗಳಿವೆಯೇ ?

ಡಾ॥ ಆರ್. ನಾಗನಗೌಡ.—ಇದಕ್ಕೆ ಸಂಬಂಧಪಟ್ಟಂಥ ಒಂದು ಪ್ರಶ್ನೆ ಮುಂದೆ ಚರ್ಚೆಗೆ ಬರಲಿರುತ್ತದೆ. ಆಗ ಈ ಪ್ರಶ್ನೆಗೆ ಉತ್ತರ ಕೊಡಲಾಗುವುದು.

ಶ್ರೀ ಎಸ್. ಸಿದ್ದಪ್ಪ.—ಈ ಸಂಸ್ಥಾನಾಮಳಿ ಇರುವ ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ವರ್ಷವರ್ಷ ಕ್ರಮವಾಗಿ ತನಿಖೆ ನಡೆಸುತ್ತಿರಲಾಗುತ್ತಿದೆಯೇ ?

ಡಾ॥ ಆರ್. ನಾಗನಗೌಡ.—ಮಾಡುತ್ತಿದೆ. ಈಗಾಗಲೆ ಮುಕ್ಕಾಲುಪಾಲು ಆಡಿಟ್ ಆಗುತ್ತಾ ಬಂದಿವೆ.

ಶ್ರೀ ಎಸ್. ಸಿದ್ದಪ್ಪ.—ಸಮಗ್ರ ಗ್ರಾಮಸೇವಾ ಸಹಕಾರ ಸಂಘಗಳು ಎಷ್ಟು ದಕ್ಷತೆಯಿಂದ ಕೆಲಸ ಮಾಡಬೇಕೋ ಅಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿವೆಯೇ ಅಥವಾ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡುತ್ತಿದ್ದೀರಾ ?

ಡಾ॥ ಆರ್. ನಾಗನಗೌಡ.—ಎಲ್ಲೆಲ್ಲಿ ಹಾಗೆ ದಕ್ಷತೆಯಿಂದ ಕೆಲಸಕಾರ್ಯಗಳು ನಡೆಯುತ್ತಿಲ್ಲವೋ ಅಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಎಸ್. ಸಿದ್ದಪ್ಪ.—ಈಗ ದುರುಪಯೋಗವಾಗುತ್ತಿರುವ ಹಣವನ್ನೂ ಮತ್ತು ದುರುಪಯೋಗ ಆಗಿ ಹೋಗಿರತಕ್ಕಂಥ ಹಣವನ್ನೂ ವಸೂಲ್ಮಾಡುವುದಕ್ಕೆ ತಾವು ಯಾವುದಾದರೂ ಇಲಾಖೆಯನ್ನು ನೇಮಕ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ವಸೂಲ್ಮಾಡುವುದಕ್ಕೆ ನಮ್ಮ ಕೋ-ಆಪರೇಟಿವ್ ಸೊಸೈಟಿ ಇನ್ಸ್‌ಪೆಕ್ಟರುಗಳಿದ್ದಾರೆ, ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿದ್ದಾರೆ. ಅವರು ಈ ಹಣದ ವಸೂಲಿ ಬಗ್ಗೆ ಹೆಚ್ಚಿನ ನಿಗಾ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಈಗ ಸಮಗ್ರಸೇವಾ ಸಹಕಾರಗಳ ಮೇಲ್ವಿಚಾರಣೆಯನ್ನು ರೆವಿನ್ಯೂ ಇನ್ಸ್‌ಪೆಕ್ಟರವರು ನೋಡಿಕೊಳ್ಳುತ್ತಿರುವುದರಿಂದ ಇವರು ದುರುಪಯೋಗ ಮಾಡಿರತಕ್ಕ ಹಣದ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಹೇಳಿದರೆ "ಈ ವಿಚಾರ ಕೋ-ಆಪರೇಟಿವ್ ಸೊಸೈಟಿಗಳ ಇಲಾಖೆಗೆ ಸಂಬಂಧಪಟ್ಟ ವಿಚಾರ, ನಾವೇನೂ ಮಾಡುವುದಕ್ಕಾಗುವುದಿಲ್ಲ" ಎಂದು ಅವರು ಹೇಳುತ್ತಿದ್ದಾರೆ. ಕೋ-ಆಪರೇಟಿವ್ ಇಲಾಖಾ ಅಧಿಕಾರಿಗಳಿಗೆ ಹೇಳಿದರೆ ಅದು ರೆವಿನ್ಯೂ ಇಲಾಖೆಯವರ ಅಡಳಿತದಲ್ಲಿರುವುದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಸಾರ್ವಜನಿಕರ ಹಣವನ್ನು ವಸೂಲ್ಮಾಡುವುದಕ್ಕೆ ತಾವೇನು ಏರ್ಪಾಡು ಮಾಡಿದ್ದೀರಿ.

ಡಾ॥ ಆರ್. ನಾಗನಗೌಡ.—ಹಣವನ್ನು ಯಾರು ಯಾರು ಎಲ್ಲೆಲ್ಲ ದುರುಪಯೋಗ ಮಾಡಿದ್ದಾರೋ ಅಂಥವರಿಂದ ಆ ದುಡ್ಡನ್ನು ವಸೂಲ್ಮಾಡುವುದಕ್ಕೆ ಯಾವಾದರೂ ಚರ್ಯೆ ತೆಗೆದುಕೊಳ್ಳಬಹುದು. ಅದಕ್ಕೇನೂ ತೊಂದರೆಯಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ಖಾಸಗಿ ಜನರು ದುಡ್ಡು ತಿಂದು ಓಡಿಹೋಗಿದ್ದಾರಲ್ಲ ಅವರಿಂದ ಆ ಹಣವನ್ನು ವಸೂಲ್ಮಾಡುವುದಕ್ಕೆ ತಾವೇನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಅವರ ಮೇಲೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಈಗ ತಾವು ಎಷ್ಟು ಜನರಿಂದ ದುಡ್ಡನ್ನು ವಸೂಲ್ಮಾಡಿದ್ದೀರಿ ? ಎಷ್ಟು ಜನರ ಮೇಲೆ ಕೇಸುಗಳನ್ನು ಹೂಡಿದ್ದೀರಿ ?

ಅಧ್ಯಕ್ಷರು.—ಆ ವಿವರಗಳನ್ನೆಲ್ಲಾ ಈಗ ಹೇಗೆ ಹೇಳುವುದಕ್ಕಾಗುತ್ತದೆ ?

ಶ್ರೀ ಟಿ. ಸಿ. ಬಸಪ್ಪ.—ಈಗ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಈ ಸೊಸೈಟಿಗಳವರು ಕಬ್ಬಿಣಕ್ಕೆ ಇಂಡೆಂಟ್ ಮಾಡಿದರೆ ಆ ಕಂಪೆನಿಯವರು ಖಾಸಗೀ ವ್ಯಾಪಾರ ನಂಜೈಗಳಿಗೆ ಈ ಸೊಸೈಟಿಗಳಿಗಿಂತಲೂ ಹೆಚ್ಚಿನ ಸಹಾಯ ನೀಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—I don't remember that any discrimination has been made in that way.

ಶ್ರೀ ಟಿ. ಸಿ. ಬಸಪ್ಪ.—ಈ ಸೊಸೈಟಿಗಳವರಿಗೆ ಕೊಂಚ ಹೆಚ್ಚಿನ ಪ್ರಿಫರೆನ್ಸ್ ಕೊಟ್ಟರೆ ಅದರಿಂದ ಇವುಗಳಿಗೆ ಸ್ವಲ್ಪ ಅನುಕೂಲವಾಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಮೊದಲೇ ಈ ಬಗ್ಗೆ ಯಾರು ಯಾವ ರಿಜಿಸ್ಟರ್ಡ್ ಡೀಲರ್ಸ್ ಎನ್ನುವುದನ್ನು ನಿರ್ಧಾರ ಮಾಡಿ ಒಂದು ಲಿಸ್ಟನ್ನೇ ತಯಾರುಮಾಡಿದ್ದಾರೆ. ಈ ಲಿಸ್ಟು All India ಕ್ಕೆ ಸಂಬಂಧಪಟ್ಟಿದ್ದಾಗಿದೆ ; ಮತ್ತು ಅದು ಇಂಡಿಯಾ ಸರ್ಕಾರದವರಿಂದ ಅಂಗೀಕರಿಸಲ್ಪಟ್ಟಿದೆ. ಈಗ ಸ್ಥಾಪಿತವಾಗಿರುವ ಹೊಸ ಸೊಸೈಟಿಗಳನ್ನೂ ಆ ಲಿಸ್ಟಿನಲ್ಲಿ ಸೇರಿಸಿರಬಹುದು. ಆದರೆ ಇಂಥಿಂಥಾ ಸಂಸ್ಥೆಯಲ್ಲಿ ಇಷ್ಟಿಷ್ಟೆ ಈ ಸಾಮಾನುಗಳನ್ನು ಸ್ವಾಧೀನಪಡಿಸಿಕೊಂಬ ಬಗ್ಗೆ ಅದನ್ನೆಲ್ಲಾ ಕೇಂದ್ರಸರ್ಕಾರ ನಿರ್ಧರ ಮಾಡಿದೆ. ಅದಕ್ಕಿಂತಲೂ ಹೆಚ್ಚಿನ ಸಾಮಾನುಗಳನ್ನು ಇದಜೀಕಾದರೆ ಕೇಂದ್ರಸರ್ಕಾರದವರಿಂದ ಅನುಮತಿ ಪಡೆಯಬೇಕಾಗಿದೆ.

ಶ್ರೀ ಟಿ. ಸಿ. ಬಸಪ್ಪ.—ಈಗ ನಾನು ಕೇಳುತ್ತಿರುವ ಪ್ರಶ್ನೆ ಅದಲ್ಲ. ಈ ದಿವಸ ಈ ಸೊಸೈಟಿಯವರೂ ಮತ್ತು ಖಾಸಗೀ ವ್ಯಾಪಾರಗಾರರೂ ಕಬ್ಬಿಣಕ್ಕಾಗಿ ಭದ್ರಾವತಿಗೆ ಇಂಡೆಂಟ್ ಕಳುಹಿಸಿದರೆ ಆ ಕಂಪೆನಿಯವರು ಈ ಸೊಸೈಟಿಗಳಿಗಿಂತಲೂ ಒಂದು ಹೆಚ್ಚಿನ ಪ್ರಿಫರೆನ್ಸನ್ನು ಆ ಖಾಸಗೀ ವ್ಯಾಪಾರಸ್ಥರಿಗೆ ತೋರಿಸುತ್ತಿದ್ದಾರೆ. ಈ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರವೇನೂ ನಮ್ಮ ಗಮನಕ್ಕೆ ಬಂದಿಲ್ಲ. ಆದರೂ ಅದನ್ನು ನಾವು ವಿಚಾರಮಾಡಿ ತಮಗೆ ಹೇಳುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.—ಈ ಸೊಸೈಟಿಗಳು ತಮ್ಮ ಲೆಕ್ಕಪತ್ರಗಳನ್ನು ಸರಿಯಾಗಿದದೆ ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—We are now auditing all of them completely and action is being taken and will be taken on the reports that we get from these auditors. Action will be taken on all of them.

ಶ್ರೀ ಟಿ. ಸಿ. ಬಸಪ್ಪ.—ತಾವೀಗ ಈ ಆಡಿಟ್ ಕೆಲಸವನ್ನು ರೆವಿನ್ಯೂ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರವರಿಗೆ ವಹಿಸಿರುವುದರಿಂದ ಬಹಳ ನಿಧಾನವಾಗುತ್ತಿದೆ. ಆದಕಾರಣ ತಾವು ಈ ಬಗ್ಗೆ ಒಂದು

ಪ್ರತ್ಯೇಕ ಇಲಾಖೆಯನ್ನು ನೇಮಿಸಿ, ಅದಕ್ಕೆ ಈ ಆಡಿಟ್ ಕೆಲಸವನ್ನು ವಹಿಸಿದರೆ ಈ ಕಾರ್ಯ ಜಾಗ್ರತೆಯಾಗಿ ಆಗುತ್ತದೆಯಲ್ಲವೇ ?

Dr. R. NAGAN GOWDA.—We have got a reguar audit department. It is independent of the administration. We have got a separate Chief Auditor of the cadre of the Deputy Registrar.

ಶ್ರೀ ಎಸ್. ಗೋಪಾಲಗೌಡ.—ಹೀಗೆ ಈ ದಿವಸ ಎಲ್ಲೆಲ್ಲಿ ಈ ಕರಪ್‌ಷನ್ ಅಲಗೇಷನ್‌ಗಳು ಇರುತ್ತವೆಯೋ ಅಂಥ ಕಡೆಗಳಲ್ಲಿ ನೂಕ್ತ ಕಾರ್ಯಕ್ರಮಗಳನ್ನು ಕೂಡಲೆ ಕೈಗೆತ್ತಿಕೊಳ್ಳದಿರುವುದಕ್ಕೆ ರಾಜಕೀಯ ಕಾರಣಗಳು—ಅಂದರೆ ಈ ಸ್ಪಾರ್ಟಿ ಇತ್ಯಾದಿ ಕಾರಣ ಗಳೇನಾದರೂ ಇರುತ್ತವೆಯೇ ?

ಡಾ॥ ಆರ್. ನಾಗನಗೌಡ.—ಅಂಥ ಕಾರಣ ಗಳೇನೂ ಇದರಲ್ಲಿರುವುದಿಲ್ಲ. They won't cut any ice in this respect.

Societies and Banks (Grants-in-aid for Buildings)

Q.—505. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the amount of grant-in-aid given for the construction of buildings to the societies and banks in the State, such as multi-purpose co-operative societies, banking societies, or banks or any other kind of societies or banks, since November 1947 up to the end of January 1955 ;

(*b*) the amount of other kind of free grant-in-aid given ?

A.—Dr. R. NAGAN GOWDA (Minister for Agriculture).—

(*a*) Rs. 1,19,750 for construction of buildings. (Please see Statement 1.)

(*b*) The amount of other kinds of free grants-in-aid given during 1947 to January 1955.—

	Rs.
Farming Co-operative Societies.	1,92,250
Bull-dozer Service	38,155
Total ...	2,30,405

(Please see Statement 2.)

	Rs.
Other types of Co-operative Societies.	2,13,917

(Please see Statement 3.)